ಅ) ಬೆಂಗಳೂರು ನಗರದಲ್ಲಿ ನರ್ಸರಿ, ಪ್ರೈಮರಿ (ಆಂಗ್ಲ ಮಾಧ್ಯಮ) ಹಾಗೂ ಐ.ಸಿ.ಎಸ್.ಇ ಮತ್ತು ಸಿ.ಬಿ.ಎಸ್.ಇ. ತರಗತಿಗಳನ್ನು ಬೋಧಿಸುವ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಎಷ್ಟು;

ಆ) ಈ ಎಲ್ಲಾ ಖಾಸಗೀ ಶಿಕ್ಷಣ ಸಂಸ್ಥೆಗಳಲ್ಲಿರುವ ಒಟ್ಟು ಸೀಟುಗಳೆಷ್ಟು;

ಇ) ತರಗತಿಗಳ ಪ್ರವೇಶಕ್ಕೆ ಖಾಸಗಿ ಶಿಕ್ಷಣ ಸಂಸ್ಥೆಗಳು ವಂತಿಗೆ ವಸೂಲು ಮಾಡುತ್ತಿರುವುದು ಹಾಗೂ ಸಂದರ್ಶನ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?

**ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):**

ಅ) ಆಂಗ್ಲ ಮಾಧ್ಯಮ ಶಾಲೆಗಳ ವಿವರ

| | ನರ್ಸರಿ | ಪ್ರೈಮರಿ | ಐ.ಸಿ.ಎಸ್.ಇ. | ಸಿ.ಬಿ.ಎಸ್.ಇ. |
|---|---|---|---|---|
| ಬೆಂಗಳೂರು ಉತ್ತರ ಜಿಲ್ಲೆ | 162 | 429 | 38 | 12 |
| ಬೆಂಗಳೂರು ದಕ್ಷಿಣ ಜಿಲ್ಲೆ | 67 | 272 | 52 | 22 |
| ಒಟ್ಟು | 229 | 601 | 90 | 34 |

ಆ) ಬೆಂಗಳೂರು ಉತ್ತರ ಜಿಲ್ಲೆ – 29,550

ಬೆಂಗಳೂರು ದಕ್ಷಿಣ ಜಿಲ್ಲೆ – 1,10,045

ಒಟ್ಟು – 1,39,595

ಇಈ) ಕೆಲ ಪ್ರಕರಣಗಳು ಗಮನಕ್ಕೆ ಬಂದಿದ್ದು ಅಂತಹ ಪ್ರಕರಣಗಳಲ್ಲಿ ಕರ್ನಾಟಕ ಶಿಕ್ಷಣ ಕಾಯಿದೆ 1983 ರಡಿ ಸಂಬಂಧಿಸಿದ ಸಂಸ್ಥೆಗಳ ವಿರುದ್ಧ ಕ್ರಮ ಜರುಗಿಸಲಾಗುತ್ತಿದೆ.

**2497(1969) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ):**–ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06ನೇ ಸಾಲಿನ ಸ್ನಾತಕೋತ್ತರ ವೈದ್ಯಕೀಯ ಪದವಿ ಕೋರ್ಸ್‌ಗಳ ಪ್ರವೇಶಕ್ಕಾಗಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಸಿ.ಇ.ಟಿ.ಯ ಪರೀಕ್ಷೆಯನ್ನು ಯಾವಾಗ ನಡೆಸಿತು;

ಆ) ಪರೀಕ್ಷೆಗೆ ಕುಳಿತ ಅಭ್ಯರ್ಥಿಗಳ ಸಂಖ್ಯೆ ಎಷ್ಟು;

ಇ) ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸಲಾಗಿದೆಯೇ;

ಈ) ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿರುವ ಸ್ನಾತಕೋತ್ತರ ವೈದ್ಯಕೀಯ ಪದವಿ ಕೋರ್ಸ್‌ಗಳ ಸೀಟುಗಳ ಸಂಖ್ಯೆ ಎಷ್ಟು;

ಉ) ಈ ಸ್ನಾತಕೋತ್ತರ ವೈದ್ಯಕೀಯ ಪದವಿ ಕೋರ್ಸ್‌ಗಳಿಗೆ 2005–06ನೇ ಸಾಲಿನ ಪ್ರವೇಶಕ್ಕಾಗಿ ಎಂದಿನಿಂದ ಕೌನ್ಸಿಲಿಂಗ್ ಪ್ರಾರಂಭಿಸಲಾಗುತ್ತದೆ?

**ಶ್ರೀ ಇಕ್ಬಾಲ್ ಅನ್ಸಾರಿ (ವೈದ್ಯಕೀಯ ಶಿಕ್ಷಣ ಸಚಿವರು):**

ಅ) 06.02.2005.

ಆ) 9424.

ಇ) 28.02.2005 ರಂದು ಪ್ರಕಟಿಸಲಾಗಿದೆ.

ಈ) 392.

ಉ) 2005ರ ಏಪ್ರಿಲ್ ನಲ್ಲಿ ನಡೆಸಲು ಉದ್ದೇಶಿಸಲಾಗಿದೆ.

**2498(1970) ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ): ಹಾಗೂ ಆರ್. ಅಶೋಕ್ (ಉತ್ತರಹಳ್ಳಿ):**–ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಜಯದೇವ ಹೃದ್ರೋಗ ಆಸ್ಪತ್ರೆಗೆ ಪ್ರತಿದಿನ ಬರತಕ್ಕ ಸರಾಸರಿ ಹೊರ ಹಾಗೂ ಒಳರೋಗಿಗಳ ಸಂಖ್ಯೆ ಎಷ್ಟು;

ಆ) ಆಸ್ಪತ್ರೆಯಲ್ಲಿ ರೋಗಿಗಳಿಗೆ ವಿಧಿಸುತ್ತಿರುವ ನೋಂದಣಿ ಶುಲ್ಕವೆಷ್ಟು;

ಇ) ನೋಂದಣಿ ಶುಲ್ಕವನ್ನು ಕಡಿಮೆ ಮಾಡಲು ಸರ್ಕಾರ ನಿರ್ಧರಿಸಿದೆಯೇ;

ಈ) ಆಸ್ಪತ್ರೆಯಲ್ಲಿರುವ ಒಟ್ಟು ಹಾಸಿಗೆಗಳ ಸಂಖ್ಯೆ ಎಷ್ಟು;

ಉ) ಎಲ್ಲಾ ಹಾಸಿಗೆಗಳೂ ಪ್ರತಿದಿನ ಭರ್ತಿಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಹೆಚ್ಚು ರೋಗಿಗಳನ್ನು ಆಕರ್ಷಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಋ) ರೋಗಿಗಳನ್ನು ನೋಡಿಕೊಳ್ಳಲು ಬರತಕ್ಕ ಸಂಬಂಧಿಕರು ಉಳಿದುಕೊಳ್ಳಲು ಧರ್ಮಶಾಲೆ ಇಲ್ಲದೇ ಇರುವುದರಿಂದ ಹೆಚ್ಚು ರೋಗಿಗಳು ಬರದೇ ಇರುವುದಕ್ಕೆ ಒಂದು ಕಾರಣವಲ್ಲವೇ;

ಋೂ) ಹಾಗಿದ್ದಲ್ಲಿ, ಈ ಆಸ್ಪತ್ರೆಯಲ್ಲಿ ಧರ್ಮಶಾಲಾ ಪ್ರಾರಂಭಿಸಲು ಸರ್ಕಾರ ಕ್ರಮಕೈಗೊಳ್ಳುವುದೇ?

**ಶ್ರೀ ಇಕ್ಬಾಲ್ ಅನ್ಸಾರಿ (ವೈದ್ಯಕೀಯ ಶಿಕ್ಷಣ ಸಚಿವರು):**

ಅ) 2004–2005ನೇ ಸಾಲಿನ ವರ್ಷದಂತೆ ಬೆಂಗಳೂರಿಗೆ ಶ್ರೀ ಜಯದೇವ ಹೃದ್ರೋಗ ಆಸ್ಪತ್ರೆಗೆ ಬರತಕ್ಕ ಸರಾಸರಿ ಹೊರರೋಗಿಗಳ ಸಂಖ್ಯೆ: 300 ಮತ್ತು ಒಳರೋಗಿಗಳ ಸಂಖ್ಯೆ: 30.

ಆ) ರೂ.50–00.

ಇ) ಇಲ್ಲ.

ಈ) 530.

ಉ) ಹೌದು, ಖಾಸಗಿ ಆಸ್ಪತ್ರೆಗಳನ್ನು ವೈದ್ಯಕೀಯ ವೆಚ್ಚದ ಮರು ಪಾವತಿಗಾಗಿ ಒಳಪಡಿಸಿರುವುದರಿಂದ ರೋಗಿಗಳ ಸಂಖ್ಯೆ ಇಳಿಮುಖವಾಗಿದೆ.